ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅರಣ್ಯ ಇಲಾಖೆಯ ಸಸ್ಯವಾಟಿಕೆಗಳಿಗೆ ಒದಗಿಸುತ್ತಿರುವ ಪಾಲಿಥೀನ್ ಚೀಲಗಳ ಬಗ್ಗೆ

೯೧೬ (೯೬೩) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮವು ಅರಣ್ಯ ಇಲಾಖೆಯ ಸಸ್ಯವಾಟಿಕೆಗಳಿಗೆ ಪಾಲಿಥೀನ್ ಚೀಲಗಳನ್ನು ಒದಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಜಿಲ್ಲಾ ಪರಿಷತ್ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳು ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದಿಂದ ಪಾಲೀಥೀನ್ ಚೀಲಗಳನ್ನು ಕೊಳ್ಳದೇ ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿ ಖಾಸಗೀಯವರಿಂದ ಕೊಳ್ಳುತ್ತಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಸರ್ಕಾರಿ ನಿರ್ದೇಶನಗಳನ್ನು ಉಲ್ಲಂಘಿಸಿದವರ ವಿರುದ್ಧ ಕ್ರಮಕೈಗೊಳ್ಳಲಾಗುವುದೇ ಮತ್ತು ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದಿಂದ ಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡುವುದೇ ?

ಶ್ರೀ ಬಿ. ಬಸನಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು).—

ಅ) ಹೌದು.

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಅರಣ್ಯ ಇಲಾಖೆಯ ಸಸ್ಯವಾಟಿಕೆಗಳಿಗೆ ಪಾಲಿಥೀನ್ ಚೀಲಗಳನ್ನು ಒದಗಿಸುತ್ತಿದೆ.

ಆ) ಇಂತಹ ಉದಾಹರಣೆಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) (ಅ) ಉತ್ತರದಿಂದ, ಈ ಕ್ರಮ ಉದ್ಭವಿಸುವುದಿಲ್ಲ.

೧೯೮೪-೯೦ನೇ ಸಾಲಿನ ಕುಟುಂಬ ಕಲ್ಯಾಣ ಕಾರ್ಯಕ್ರಮದ ಗುರಿಯನ್ನು ಸಾಧಿಸುವ ಬಗ್ಗೆ

೯೧೭ (೯೬೮) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೪-೯೦ನೇ ಸಾಲಿಗೆ ಕುಟುಂಬ ಕಲ್ಯಾಣ ಕಾರ್ಯಕ್ರಮದ ಗುರಿಗಳನ್ನು ಸಾಧಿಸದೇ ಇರುವುದು ಸರ್ಕಾರಕ್ಕೆ ತಿಳಿದಿದೆಯೇ ? ಹಾಗಿದ್ದರೆ ಕಾರಣಗಳು ?

ಆ) ಸರ್ಕಾರವು ಕುಟುಂಬ ಕಲ್ಯಾಣ ಫಲಾನುಭವಿಗಳಿಗೆ ಸರ್ಕಾರದ ಪರವಿಯಿಂದ ಲಾಭದಾಯಕ ಪ್ರೋತ್ಸಾಹನಾ ತೋರಿಸುವುದರ ಮೂಲಕ ಪರೋಕ್ಷವಾಗಿ ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಕಡ್ಡಾಯಗೊಳಿಸಲು ಕಾರ್ಯಗತ ಗೊಳಿಸಲಾಗುತ್ತಿದೆಯೇ

ಶ್ರೀಮತಿ ಮನೋರಮಾ ಮಾಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಶಸ್ತ್ರ ಚಿಕಿತ್ಸೆ, ಮಂಕಿ ಆಳವಡಿಸುವುದು ಮತ್ತು ನಿರೋಧ್ ಉಪಯೋಗಿಸುವವರು ವಿಧಾನಗಳಲ್ಲಿ ಶೇಕಡ ೧೦೦ ರಷ್ಟು ಸಾಧನೆಯಾಗಿಲ್ಲ. ಆದರೆ ಸಂಗುವ ಗುಳಿಗೆಯಲ್ಲಿ ೧೫೦.೮(ಶೇಕಡ) ಆಗಿದೆ. ಗುಲ್ಬರ್ಗ, ರಾಯಚೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಕೋಲಾರ ಜಿಲ್ಲೆಗಳಿಂದ ಅರ್ಹದಂಪತಿಗಳು ನಿರೀಕ್ಷಿಸಿದಷ್ಟು ಕುಟುಂಬ ಕಲ್ಯಾಣ ವಿಧಾನಗಳನ್ನು ಅನುಸರಿಸದೇ ಇರುವುದು ರಾಜ್ಯಂದ ಗುರಿ ಶೇಕಡ ನೂರರಷ್ಟು ಸಾಧನೆಯಾಗದೇ ಇರುವುದಕ್ಕೆ ಕಾರಣವಾಗಿದೆ.

ದೇಶದ ಕುಟುಂಬ ಕಲ್ಯಾಣ ಕಾರ್ಯಕ್ರಮದ ತುಲನಾತ್ಮಕ ಪ್ರಗತಿಯಲ್ಲಿ ರಾಜ್ಯಕ್ಕೆ ನಾಲ್ಕನೆ ಸ್ಥಾನ ಲಭಿಸಿದೆ.

ಆ) ಇಲ್ಲ.